ಮಕ್ಕಳಿಗಾಗಿ ಬೈಬಲ್
ಅರ್ಪಿಸುವ

# ಯೇಸು ಹನ್ನೆರಡು ಶಿಷ್ಯರನ್ನು ಆರಿಸಿಕೊಂಡಿದ್ದು



ಬರಹಗಾರರು: Edward Hughes

ಚಿತ್ರಲೇಖಕರು: Byron Unger; Lazarus

ಅಳವಡಿಸುವವರು: E. Frischbutter; Sarah S.

ಪದ್ಮಾ ಸ್ಶೈಲೇಸ್: Vinay Shirol

ತಯಾರಕರು: Bible for Children
www.M1914.org

©2017 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಯೇಸು ಜನರನ್ನು ಗುಣಪಡಿಸುತ್ತಾ, ಕಷ್ಟ ತೊಂದರೆಗಳಲ್ಲಿದ್ದಂತವರಿಗೆ ಶಾಂತಿಯನ್ನು ಕೊಡುತ್ತಾ ಅನೇಕ ಅದ್ಭುತ ಕರ್ಯಗಳನ್ನು ಮಾಡಿದನು.



ಜನರು ಆತನಿಂದ ಸಹಾಯ ಮತ್ತು ಸ್ವಸ್ಥತೆಯನ್ನು ಹೊಂದಲು ಬರುತ್ತಿದ್ದರು, ತನ್ನನ್ನು ಹಿಂಬಾಲಿಸುತ್ತಿದ್ದ ಜನರೆಲ್ಲಿ ಹನ್ನೇರಡು ...



... ಜನರನ್ನು ದೇವರ ಸೇವೆಗಾಗಿಯೂ ಮತ್ತು ತನಗೆ
ಸಹಾಯಕವಾಗಿಯೂ ಅವರನ್ನು ತನ್ನ
ಶಿಷ್ಯರನ್ನಾಗಿ ಮಾಡಿಕೊಂಡನು.





ನೀವು ಪ್ರಾಮುಕ್ಯವಾದದ್ದನ್ನು ನೀಮ್ಮ ಜೀವನನ್ನು ಆಯ್ದುಕೋಳ್ಳವಾಗ ದೇವರಲ್ಲಿ ಪ್ರಾರ್ಥಿಸುತ್ತಿರಾ? ಆದರೆ ಯೇಸು ಪ್ರಾರ್ಥನೆ ಮಾಡಿದ ಏಕಾಂತವಾದ ಬೆಟ್ಟದ ಮೇಲೆ ಪರಲೋಕದ ತನ್ನ ತಂದೆಯೊಂದಿಗೆ

ಮಾತಾಡಿದನು.

ಯೇಸು ಬೆಳಿಗ್ಗೆಯಿಂದ
ಸೂರ್ಯ
ಮುಳುಗುವವರೆಗೂ
ಪ್ರಾರ್ಥಿಸಿದನು.





ಯೇಸು ರಾತ್ರಿ ಇಡೀ
ಪ್ರಾರ್ಥನೆಯಲ್ಲಿ
ಕಳೆದನು.


ಬೆಳಗಿನ ಜಾವ ಯೇಸು ತನ್ನ ಹಿಂಬಾಲಕರನ್ನು ಮತ್ತು
ಆತನನ್ನು ನಂಬಿ ಸೇವೆಮಾಡುತ್ತಿದ್ದ
ಸ್ನೇಹಿತರನ್ನು
ಕರೆದು ...

... ಅವರಲ್ಲಿ ೧೨ ಜನರನ್ನು ತನ್ನ ಶಿಷ್ಯರನ್ನಾಗಿ ಅಂದರೆ ಅಪೊಸ್ತಲರನ್ನಾಗಿ ನೇಮಿಸಿದನು.



ಯೇಸು ಆರಿಸಿಕೊಂಡ ಮೊದಲ ಇಬ್ಬರು ಶಿಷ್ಯರಾದ
ಸಿಮಿಯೋನ ಪೆತ್ರ ಮತ್ತು ಅಂದ್ರೆಯ ಇಬ್ಬರು
ಸಹೋದರರರಾಗಿದ್ದರು, ಯೇಸುವಿನ ಕರೆಗೆ, ಅವರು
ಮಾಡುತ್ತಿದ್ದಂತಹ ಮೀನ ಹಿಡಿಯುವ
ಕೆಲಸ
(ವ್ಯಾಪಾರ)
ವನ್ನು ಬಿಟ್ಟು
ಆತನನ್ನು ಹಿಂಬಾಲಿಸಿದರು.



ಜಬದಿಯನ
ಮಕ್ಕಳಾದ ಯಾಕೋಬ ಮತ್ತು
ಯೋಹಾನರು ಸಹ ಮೀನನ್ನು ಹಿಡಿಯುವ
ಬಲೆಯನ್ನು ಬಿಟ್ಟರು.



ಯೇಸುವು ಇನ್ನು ಅನೇಕರನ್ನು ಆರಿಸಿಕೊಂಡನು,
ಅವರು ಯಾರಾರಂದರೆ ಫಿಲಿಪ್ಪ, ಬಾರ್ತೊಲೊಮಾಯ,
ಮತ್ತಾಯ, ತೋಮ, ಅಲ್ಫಾಯನ
ಮಗನಾದ ಯಾಕೋಬ,
ಮತಾಬಿಮಾನಿ
ಎನಿಸಿಕೊಂಡ
ಸೀಮೋನ, ...



... ಯಾಕೋಬನ ಮಗನಾದ ಯೂದ,

ಮತ್ತು ಆತನನ್ನು ಹಿಡಿದುಕೊಡುವ

ದ್ರೋಹಿಯಾದ ಇಸ್ಕರಿಯಾದ

ಯೂದ,

ಇವರೇ.



ಯೇಸು ಅವರಿಗೆ ಕಲಿಸಿದ್ದೆನೆಂದರೆ, ಅವನು ಹೇಳಿದ ಹಾಗೆ ಮಾಡುವವನು ಗಟ್ಟಿಯಾದ ಬಂಡೆಯಮೇಲೆ ಮನೆಕಟ್ಟಿಕೊಂಡವನಂತಿರುವನು, ಅದಕ್ಕೆ ಎಂತಹ ಬಿರುಗಾಳಿ ಬಂದು ಬಡೆದರು



ಬಿಳುವುದಿಲ್ಲ.

ಆದರೆ ಯಾವನು ಅವನು ಮಾತಿಗೆ ವಿಧೇಯನಾಗವುದಿಲ್ಲವೋ ಅಂತವನು ಮರಳಿನ ಮೇಲೆ ಮನೆ ಕಟ್ಟಿಕೊಂಡವನಾಗಿದ್ದಾನೆ, ಅದಕ್ಕೆ ಬಿರುಗಾಳಿ ಬಂದು ಅಪ್ಪಳಿಸಿದಾಗ ಅದು ಬಿಳ್ಳುವಂತಹದಾಗಿತ್ತು.



ಯೇಸುವಿನ ಕೇಲವು ಆಜ್ಞೆಗಳು ಅಷ್ಟು
ಸರಳವಾಗಿರಲ್ಲಿಲ್ಲಾ. "ಯಾವನಾದರು
ನೀಮನ್ನು ಬಲ ಕೆನ್ನೇಗೆ ಹೊಡೆದರೆ,
ನಿನ್ನ ಎಡ ಕೆನ್ನೆಯನ್ನು ತೊರಿಸು"
ಎಂತಲೂ,

...



... ನಿನ್ನ ವೈರಿಗಳನ್ನು ಪ್ರೀತಿಸು,
ಎಂದು ಕಲಿಸಿದನು, ಜನರಿಗೆ
ಯೇಸುವಿನ ಹಾಗೆ ಜೀವಿಸಲು
ದೇವರ ಸಹಾಯ ಬೇಕು.



ಯೇಸು ಏಕಾಂತವಾಗಿ ಪ್ರಾರ್ಥಿಸಲು ಜನರಿಗೆ ಉಪದೇಶಿಸಿದನು, ಅನೇಕ ಧರ್ಮದ ನಾಯಕರು, ಜನರು ನೋಡಲಿ ಎಂದು ತೋರ್ಪಡಿಕೆಗೆ ಪ್ರಾರ್ಥನೆ ಮಾಡುತ್ತಿದ್ದರು.





ಯೇಸು ಹೇಳಿದ್ದು
ಯಾರಾರು ದೇವರ ಮೇಲೆ
ಬರವಸೆಯಿಡುತ್ತಾರೋ, ಅಂಥವರಿಗೆ
ಬಟ್ಟೆ, ಆಹಾರವನ್ನು ಒದಗಿಸುತ್ತಾನೆ
ಎಂದು ಹೇಳಿದನು ಆಕಾಶದಲ್ಲಿ

ಹಾರಾಡುವ

ಹಕ್ಕಿಗಳು, ...

... ಅಡವಿಯ ಹೂಗಳಿಗೆ
ಬಣ್ಣವನ್ನು ದೇವರು
ಒದಗಿಸುತ್ತಾನೆ, ಆತನ ಜನರಾದ
ತಮ್ಮ ಎಲ್ಲಾ ಅಗತ್ಯತೆಗಳಿಗೆ
ಬರವಸಯಿಡುವದು.



ಆ ದಿವಸ ಯೇಸು ಹೊಸದಾಗಿ ಆಯ್ದುಕೊಂಡ ಸಹಾಯಕರಿಗೆ ಅನೇಕ ಸಂಗತಿಗಳನ್ನು ಉಪದೇಶಿಸಿದನು, ಅದನ್ನು ಮುಗಿಸುವದರೊಳಗೆ, ಕುಷ್ಟರೋಗದಿಂದ ಬಳಲುತ್ತಿದ್ದ ಒಬ್ಬನು ಬಂದು ಆತನನ್ನು ಗುಣಪಡಿಸಬೇಕೆಂದು ಯೇಸುವಿಗೆ ಮೊರೆಟ್ಟನು.



ಆಗ ಯೇಸು ಅವನಿಗೆ ನಾನು ಸ್ವಸ್ಥಪಡಿಸುತ್ತೆನೆ,
ಶುದ್ಧನಾಗು ಎಂದು ಉತ್ತರ
ಕೊಟ್ಟನು ಆತನ ಶಿಷ್ಯರು
ನೋಡುತ್ತೀರುವಾಗಲೆ
ಕುಷ್ಟರೋಗಿಯೂ ಪೂರ್ಣ
ಗುಣವಾಗಿ ಸ್ವಸ್ಥನಾದನು





ದೇವರ ಮಗನಿಂದ
ಇದು ಸಾಧ್ಯವಾಯಿತು
ಆಶ್ಚರ್ಯಕರ ಗುರುವು
ದೊರಕಿದನೆಂದು
ಶಿಷ್ಯರು
ತಿಳಿದುಕೊಂಡರು.

ಯೇಸು ಹನ್ನೆರಡು ಶಿಷ್ಯರನ್ನು ಆರಿಸಿಕೊಂಡಿದ್ದು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಮತ್ತಾಯ 4–7, ಮಾರ್ಕ 1, ಲೂಕ 6

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ 119:130

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು
ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು  ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು.
ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ
ದೇವರೊಂದಿಗೆ ಮಾತಾಡು!
ಯೋಹಾನ 3:16